# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ,ಬಿ.ಹೆಚ್.ರಸ್ತೆ,ತುಮಕೂರು-572 103 ☎:0816- 2255650,2273511 ಫ್ಯಾಕ್ಸ್:0816-2270719


ಸಂಖ್ಯೆ:ತುವಿ:ಪವಿ:2021–22 | 1070 ದಿನಾಂಕ:03.02.2022

ಅತೀ ತುರ್ತು

## : ಸುತ್ತೋಲೆ :

ವಿಷಯ : ಸ್ನಾತಕ/ಸ್ನಾತಕೋತ್ತರ ಪದವಿಗಳಲ್ಲಿ ಅತೀ ಹೆಚ್ಚು ಅಂಕ ಪಡೆದ ತಾತ್ಕಾಲಿಕ ಪಟ್ಟಿಯಲ್ಲಿರುವ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದ್ದರ ಬಗ್ಗೆ.

ಉಲ್ಲೇಖ : 1. ಸುತ್ತೋಲೆ ಸಂಖ್ಯೆ:ತುವಿ:ಪವಿ:2021–22/1004 ದಿನಾಂಕ:11.01.2022
2. ಪರಿಷ್ಕೃತ ಸುತ್ತೋಲೆ ಸಂಖ್ಯೆ:ತುವಿ:ಪವಿ:2021–22/1054 ದಿನಾಂಕ:20.01.2022

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) & (2) ರನ್ವಯ ತುಮಕೂರು ವಿಶ್ವವಿದ್ಯಾನಿಲಯದ ಹದಿನೈದನೇ ವಾರ್ಷಿಕ ಘಟಿಕೋತ್ಸವಕ್ಕೆ ಸಂಬಂಧಿಸಿದ **ಬಿ.ಎ., ಬಿ.ಎಸ್ಸಿ., ಬಿ.ಕಾಂ., ಎಂ.ಎ., ಎಂ.ಎಸ್ಸಿ., ಎಂ.ಕಾಂ., ಹಾಗೂ ಎಂ.ಬಿ.ಎ** ಪದವಿಗಳಲ್ಲಿ ಅತೀ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳ ಹಾಗೂ ಎಂ.ಎಸ್ಸಿ. **(ಪ್ರಾಣಿಶಾಸ್ತ್ರ)**, ಎಂ.ಎಸ್ಸಿ. **(ಸಸ್ಯಶಾಸ್ತ್ರ)** ಪದವಿಗಳಲ್ಲಿ ಸಾಮಾನ್ಯ ವರ್ಗದವರನ್ನೊಳಗೊಂಡಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣ **www.tumkuruniversity.ac.in** ದಲ್ಲಿ ಪ್ರಕಟಿಸಿ, ಸದರಿ ಪಟ್ಟಿಯಲ್ಲಿ ನಮೂದಿಸಲಾಗಿರುವ ವಿದ್ಯಾರ್ಥಿಗಳು **ಗ್ರಾಮೀಣ ಪ್ರದೇಶದ , ಕೃಷಿ ಕುಟುಂಬಕ್ಕೆ ಸೇರಿದ ಮತ್ತು ಬಿ.ಪಿ.ಎಲ್. ಕಾರ್ಡ್ ಹೊಂದಿರುವ ವಿದ್ಯಾರ್ಥಿಗಳಾಗಬೇಕಾಗಿದ್ದು,** ಈ ಸಂಬಂಧ ಸದರಿ ಪಟ್ಟಿಯಲ್ಲಿ ತಮ್ಮ ಕಾಲೇಜಿನ ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಖಾಯಂ ಅಂಚೆ ವಿಳಾಸ, ದೂರವಾಣಿ ಸಂಖ್ಯೆಗಳನ್ನೊಳಗೊಂಡಂತೆ ಮೇಲೆ ತಿಳಿಸಿರುವ ದಾಖಲೆ/ಮಾಹಿತಿಗಳೊಂದಿಗೆ ಕ್ರಮವಾಗಿ ದಿನಾಂಕ:24.01.2022 & 27.01.2022 ರೊಳಗಾಗಿ ಈ ಕಛೇರಿಗೆ ಖುದ್ದಾಗಿ ಹಾಜರಾಗುವಂತೆ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಸೂಚಿಸುವಂತೆ ಈ ಮೂಲಕ ತಮಗೆ ತಿಳಿಸಲಾಗಿತ್ತು. ಆದಾಗ್ಯೂ ಇದುವರೆವಿಗೂ ಇನ್ನೂ ಕೆಲವು ವಿದ್ಯಾರ್ಥಿಗಳು ಮೇಲೆ ತಿಳಿಸಿರುವ ದಾಖಲೆಗಳನ್ನು ಒದಗಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ ವಿದ್ಯಾರ್ಥಿಗಳಿಗೆ **ದಿನಾಂಕ:07.02.2022** ರೊಳಗಾಗಿ ಪರೀಕ್ಷಾ ವಿಭಾಗಕ್ಕೆ ಖುದ್ದು ಹಾಜರಾಗಿ ಅಗತ್ಯ ದಾಖಲೆ/ಮಾಹಿತಿಗಳನ್ನು ಕಡ್ಡಾಯವಾಗಿ ಸಲ್ಲಿಸುವಂತೆ ಸೂಚಿಸಲು ಈ ಮೂಲಕ ಮತ್ತೊಮ್ಮೆ ತಮಗೆ ತಿಳಿಸಲಾಗಿದೆ.

**ಕುಲಸಚಿವರು(ಪರೀಕ್ಷಾಂಗ)**

ಕುಲಸಚಿವರು (ಪರೀಕ್ಷಾಂಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಗೆ,**

1. **ಪ್ರಾಂಶುಪಾಲರು, ಘಟಕ/ಸಂಯೋಜಿತ ಸ್ನಾತಕ/ಸ್ನಾತಕೋತ್ತರ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**
2. **ಮುಖ್ಯಸ್ಥರು/ನಿರ್ದೇಶಕರು, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**

ಪ್ರತಿಗಳು.

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಸುತ್ತೋಲೆಯನ್ನು ಇಂದೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ